ಕೊಳ್ಳುವುದೇ ಇಲ್ಲ. ಇವಳೂ ಆ ಹುಡುಗರ ಜೊತೆ ಬೆರೆತು ಅವರ ತರಹಾನೇ ಆಡ್ತಾಳೆ.' ಎಂದು ಹೆಂಡತಿಯನ್ನೇ, ಸದಾ ಅವರು ಮಾಡುವಂತೆ, ಮನಸ್ಸಿನಲ್ಲಿಯೇ ಶಪಿಸಿದರು. 'ಇನ್ನು ಇದನ್ನು ನೋಡಲಾರೆ' ಎನ್ನಿಸಿತು ಅವರಿಗೆ. ಕೂಡಲೇ ತಮ್ಮ ಮೊಬೈಲಿನತ್ತ ನೋಡಿಕೊಂಡರು. ನಂತರ ಎಲ್ಲರನ್ನೂ ಉದ್ದೇಶಿಸಿ,

"ನನ್ನ ಪೇಷಂಟ್ ಒಬ್ಬರಿಗೆ ಸೀರಿಯಸ್ ಆಗಿದೆಯಂತೆ. ಇಲ್ಲಿನ ದೊಡ್ಡ ಆಸ್ಪತ್ರೆಗೆ ಹಾಕಿದ್ದಾರೆ. ಅವರನ್ನು ನೋಡಿಕೊಂಡು ಬರಬೇಕು. ನಾನು ಹೊರಡುತ್ತೇನೆ. ನೀವೆಲ್ಲಾ ಹಾಯಾಗಿ ಮಲಗಿ. ಬಂದು ನೋಡುತ್ತೇನೆ." ಎಂದವರೇ ಹೊರಟು ನಿಂತರು. ಪದ್ಮಾ ಗುಡುಗಿದರು: "ಆಸ್ಪತ್ರೆಯಲ್ಲಿರೋ ಡಾಕ್ಟರು ಎಲ್ಲಾ ನೋಡಿಕೋತಾರೆ. ನೀವ್ಯಾಕೆ ಈ ಮಳೇಲಿ ಹೋಗಬೇಕು. ಮಗಳು ಬಂದಿದಾಳೆ. ಇಲ್ಲೇ ಇದ್ರೆ ಆಗದಾ?"

"ಇಲ್ಲ, ಇಲ್ಲ. ಇದು ಬಹಳ ಅರ್ಜೆಂಟ್" ಎಂದು ರವಿಶಂಕರ್ ಹೊರಟೇ ಬಿಟ್ಟರು. ಇವೆಲ್ಲಾ ನಾಟಕ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೊರಟವರು ಕಾರನ್ನು ಸ್ಟಾರ್ಟ್ ಮಾಡಿದರು, ಎಲ್ಲಿಗೆ ಹೋಗುವುದೋ ಗೊತ್ತಿಲ್ಲ. ಅಭ್ಯಾಸ ಬಲ ಎಂಬಂತೆ ಕಾರು ತಾನಾಗಿಯೇ ಅವರ ದವಾಖಾನೆಯ ದಿಕ್ಕಿನಲ್ಲಿ ಹೊರಟಿತು. ಇನ್ನೂ ಸುರಿಯುತ್ತಿದ್ದ ಮಳೆ. ರಸ್ತೆಯೇ ಸರಿಯಾಗಿ ಕಾಣುತ್ತಿರಲಿಲ್ಲ. ಅವರಿಗೆ ಒಂದೇ ರೋಷ. ಅವರ ಕಣ್ಣೆದುರಿನಲ್ಲಿಯೇ ಹೀಗಾಯಿತೇ? ಇದೇ ಗುಂಗಿನಲ್ಲಿ ಡ್ರೈವ್ ಮಾಡುತಿದ್ದರು. ಹಳ್ಳಿಯ ಮಧ್ಯ ಭಾಗದಲ್ಲಿ ಸಿಗ್ನಲ್ ಲೈಟೊಂದು ಕೆಂಪು ಬಣ್ಣ ತೋರಿಸುತ್ತಿತ್ತು. ಏನನ್ನೂ ನೋಡದೆ ರವಿಶಂಕರ್ ಮುನ್ನುಗ್ಗಿದರು. ಪಕ್ಕದಿಂದ ಬರುತ್ತಿದ್ದ ಕಾರಿನ ಡ್ರೈವರ್ ಸರಿ ಹೊತ್ತಿನಲ್ಲಿ ಇದನ್ನು ಗಮನಿಸಿ ಬ್ರೇಕ್ ಹಾಕಿದ. ಅಪಘಾತವೇನೂ ಆಗಲಿಲ್ಲ. ಆದರೆ ಹತ್ತಿರದಲ್ಲಿಯೇ ಇದ್ದ ಪೊಲೀಸನೊಬ್ಬ ಇದನ್ನು ಕಂಡು ತನ್ನ ಕಾರಿನಲ್ಲಿ ಅವರನ್ನು ಹಿಂಬಾಲಿಸಿಕೊಂಡು ಬಂದು ನಿಲ್ಲಿಸುವಂತೆ ಆದೇಶ ನೀಡಿದ. ರವಿಶಂಕರ್ ನಿಲ್ಲಿಸಿದರು. ಕಿಟಕಿಯನ್ನು ತೆರೆದು ಅವನತ್ತ ನೋಡಿದರು. ಅವನಾರೂ ಅಲ್ಲ, ಅವರಿಗೆ ಚಿರಪರಿಚಿತ ಮತ್ತು ಇವರ ಪೇಷಂಟ್ ಸ್ಟೀವನ್. ಅವನು ಕೂಡಲೇ,

"ಏನು ಡಾಕ್ಟರೇ, ಹೀಗೆ ಮಾಡಿಬಿಟ್ರಿ. ರೆಡ್‌ಲೈಟ್ ಕಾಣಲಿಲ್ಲವೇ? ಹುಷಾರಾಗಿದ್ದೀರಿ ತಾನೇ?"

"ಏನೂ ಇಲ್ಲ, ಸ್ಟೀವನ್. ಅರ್ಜೆಂಟಾಗಿ ದವಾಖಾನೆಯಲ್ಲಿ ರೋಗಿಯೊಬ್ಬನ ರಿಕಾರ್ಡ್ ನೋಡ ಬೇಕಿತ್ತು. ಅವನು ಆಸ್ಪತ್ರೆಯಲ್ಲಿದ್ದಾನೆ. ಅದಕ್ಕೆ ಹೀಗಾಗಿರಬಹುದು."

"ಆದರೂ ಡಾಕ್ಟರೇ ಹುಷಾರಾಗಿರಿ. ನನಗೆ ಬೇರೆ ಮಾರ್ಗವಿಲ್ಲ. ನೀವು ತಪ್ಪು ಮಾಡಿದ್ದನ್ನು ನೋಡಿಯೂ ನಾನು ಸುಮ್ಮನಿರಲಾರೆ. ಕಾನೂನಿನ ಪ್ರಕಾರ ನಿಮಗೆ 433 ಡಾಲರ್ ದಂಡ ವಿಧಿಸಿದ್ದೇನೆ. ನೀವು ಬೇಕಿದ್ದರೆ ಕೋರ್ಟಿಗೆ ಹೋಗಿ ನಿಮ್ಮ ಅಹವಾಲನ್ನು ಹೇಳಿಕೊಳ್ಳಿ. ಜಡ್ಜ್ ನಿಮ್ಮ ದಂಡವನ್ನು ಮನ್ನಾ ಮಾಡಬಹುದು. ಆದರೆ ಇವೆಲ್ಲಾ ತರಲೆ ಕೆಲಸ. ಈಗ ನಿಮ್ಮ ಪೇಷಂಟ್ ಆಗಿ ಹೇಳುತ್ತೇನೆ, ಈ ಮಳೆಯಲ್ಲಿ ದಯವಿಟ್ಟು ಡ್ರೈವ್ ಮಾಡಬೇಡಿ. ಬೇಕಾದರೆ ನಿಮ್ಮ ಕಾರನ್ನು ಇಲ್ಲಿಯೇ ನಿಲ್ಲಿಸಿ ನನ್ನ ಜೊತೆ ಬನ್ನಿ. ನಿಮ್ಮನ್ನು ಎಲ್ಲಿಗೆ ಬೇಕಾದರೂ ಕರೆದೊಯ್ಯುತ್ತೇನೆ."

"ಬೇಡ, ಬೇಡ. ನಾನೇ ಹೋಗುತ್ತೇನೆ ಬಿಡಿ. ನಾನು ಮಾಡಿದ್ದಕ್ಕೆ ಕ್ಷಮೆ ಕೋರುತ್ತೇನೆ. ದಂಡ ಮುಖ್ಯವಲ್ಲ ನನಗೆ. ಅಪಘಾತವಾಗಿದ್ದರೆ ಏನು ಗತಿ?"

ಮಗಳು ಮತ್ತು ಅವಳ ಸ್ನೇಹಿತ ಹಾಗಾಡಿದ್ದಕ್ಕೆ ರೋಷ ಒಂದು ಕಡೆ, ನನ್ನ ಮಗಳೇ ಹೀಗೆ ಮಾಡಿದಳೇ ಎಂಬ ಸಂಕಟ ಮತ್ತೊಂದು ಕಡೆ. ಸ್ವಲ್ಪ ಜಾಗ್ರತೆ ವಹಿಸಿ ಡ್ರೈವ್ ಮಾಡಿ ತಮ್ಮ ದವಾಖಾನೆಯನ್ನು ತಲುಪಿದರು. ಬಾಗಿಲನ್ನು ತೆರೆದು ಒಳಗೆ ಲೈಟ್ ಹಾಕಿಕೊಂಡರು. ಒಮ್ಮೆಗೇ ಅವರಿಗನ್ನಿಸಿತು – 'ನಾನು ಇಲ್ಲಿಗೇಕೆ ಬಂದೆ? ಇಲ್ಲಿ ಮಲಗುವುದೇ?' ಒಳಗೆ ಹೋಗಿ ತಮ್ಮ